ಕರ್ನಾಟಕ ವಿಧಾನ ಸಭೆ

ಮಂಗಳವಾರ, ದಿನಾಂಕ ೩ನೇ ಫೆಬ್ರವರಿ ೧೯೮೭

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಜಿಲ್ಲಾಮಟ್ಟದಲ್ಲಿ ಅಬ್ಕಾರಿ ಇಲಾಖೆ ಅಧಿಕಾರಿಗಳ ವರ್ಗಾವಣೆ ಬಗ್ಗೆ

೪೦(೮೯) ಶ್ರೀ ಐ. ಬಿ. ಶಂಕರ್(ಚಿಕ್ಕಮಗಳೂರು).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಅಬ್ಕಾರಿ ಇಲಾಖೆಯಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ೧೦-೧೨ ವರ್ಷದಿಂದಲೂ ಒಂದೇ ಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ವರ್ಗಾವಣೆಯಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿ ಯಾವುದು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಇಲ್ಲ.

ಉತ್ತರ (ಅ)ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಐ.ಬಿ. ಶಂಕರ್,—ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯಲ್ಲಿ ಸ್ವಲ್ಪ ಲೋಪದೋಷವಾಗಿರುವುದರಿಂದ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇವತ್ತು ಏನು ಈ ಅಧಿಕಾರಿಗಳ ವರ್ಗಾವಣೆ ಇದೆ ಇದರಲ್ಲಿ ಆ ಅಧಿಕಾರಿಗಳು ಸಹಕಾರ ಅನುಕೂಲವಿಲ್ಲದೇ ಇರತಕ್ಕವರು ಕೊನೇವರೆಗೆ ಫ್ಯಾಕ್ಟರಿಗಳಲ್ಲೇ ಅಥವಾ ಇನ್ನೊಂದು ಕಡೆ ಇರುವುದು ಅಥವಾ ಅನುಕೂಲವಿದ್ದಂತಹವರು ಕೊನೆವರೆಗೆ ಜಿಲ್ಲಾಮಟ್ಟದ ಸ್ಥಾನಗಳಲ್ಲಿ ಇರಲು ಕಾರಣವೆ ನು ಎನ್ನುವುದು ನನ್ನ ಪ್ರಶ್ನೆ. ಎರಡನೆಯದು ಇಂಥಾದ್ದಕ್ಕೆ ಸರ್ಕಾರ ನಿಯಮಗಳನ್ನು ಇಟ್ಟುಕೊಂಡು ನಡೆಸುತ್ತಿದ್ದಾರೆಯೇ. ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು ಎಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಅವರು ಕೇಳಿರತಕ್ಕಂಥಾದ್ದು ಜಿಲ್ಲಾಮಟ್ಟದಲ್ಲಿ ಯಾರಾದರೂ ಅಧಿಕಾರಿಗಳು ೧೦-೧೨ ವರ್ಷಗಳ ಕಾಲ ಒಂದೆಕಡೆ ಇರತಕ್ಕ ಮಾಹಿತಿ ಏನಾದರೂ ಇದೆಯೇ ಎಂದು ಕೇಳಿದ್ದಕ್ಕೆ ಯಾವುದೂ ಇಲ್ಲ ಎಂದು ಹೇಳಿದ್ದೇನೆ. ಜಿಲ್ಲಾಮಟ್ಟದಲ್ಲಿ ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್ ಇರುತ್ತಾರೆ. ಇಂಥವರು ಯಾರನ್ನೂ ಇರಿಸಿಲ್ಲ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳತಕ್ಕ ಪ್ರಯತ್ನ ಮಾಡಿದ್ದಾರೆ, ಅದಕ್ಕೆ ಈಗ ಮಾಹಿತಿ ಕೊಡಲಾರೆ.

ಅಧ್ಯಕ್ಷರು.—ಮಾನ್ಯ ಶಂಕರ್‌ರವರೇ, ಮಂತ್ರಿಗಳು ಉತ್ತರ ಕ್ಲಿಯರಾಗಿ ಕೊಟ್ಟಿದ್ದಾರೆ. ಇಂಥವರು ಇಂಥ ಕಡೆ ಇಷ್ಟು ವರ್ಷಗಳಿಂದ ಇದ್ದಾರೆ ಎನ್ನುವುದು ತಮಗೆ ಗೊತ್ತಿದ್ದರೆ ನಿರ್ದಿಷ್ಟವಾಗಿ ಪ್ರಶ್ನೆ ಕೇಳಿ.

ಶ್ರೀ ಶಂಕರ್.—ಸ್ವಾಮಿ ತಾವು ನನಗೆ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ತಾವು ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಒಪ್ಪಿ ಅವಕಾಶ ಮಾಡಿ ಕೊಟ್ಟರೆ ನನ್ನ ಅಭ್ಯಂತರ ಏನೂ ಇಲ್ಲ: ಅವರು ಕೇಳಿರತಕ್ಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಟ್ಟಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಸ್ವಾಮಿ, ೧೦–೧೨ ವರ್ಷಗಳ ಕಾಲ ಯಾರನ್ನೂ ಒಂದೇ ಕಡೆ ಇರಿಸಿಲ್ಲ ಎಂದು ಹೇಳಿದರು. ಸರ್ಕಾರದ ನೀತಿ ಪ್ರಕಾರ ಎಷ್ಟು ವರ್ಷಕ್ಕೊಮ್ಮೆ ವರ್ಗಾವಣೆ ಮಾಡಲಾಗುವುದು, ೫ ವರ್ಷಕ್ಕೂ ಮೇಲ್ಪಟ್ಟವರು ಎಷ್ಟು ಜನ ಇದ್ದಾರೆನ್ನುವುದನ್ನು, ತಿಳಿಸುತ್ತೀರಾ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—೫ ವರ್ಷಕ್ಕೂ ಮೇಲ್ಪಟ್ಟು ಇರತಕ್ಕವರ ವಿಚಾರದಲ್ಲಿ ಮಾಹಿತಿ ತರಿಸಿಕೊಡುತ್ತೇನೆ. ಬೇರೆ ಇಲಾಖೆಗಳಲ್ಲಿ ಯಾವ ರೀತಿಯ ವರ್ಗಾವಣೆ ನೀತಿಯನ್ನು ಇಡಲಾಗಿದೆಯೋ ಆಬ್ಕಾರಿ ಇಲಾಖೆಯಲ್ಲಿಯೂ ಅದೇ ನೀತಿಯನ್ನು ಅನುಸರಿಸಲಾಗುತ್ತಿದೆ. ನಿರ್ದಿಷ್ಟವಾದ ಪ್ರಕರಣಗಳು ಇದ್ದರೆ ತಿಳಿಸಲಿ, ಉತ್ತರ ಕೊಡುತ್ತೇನೆ.

ಬೆಂಗಳೂರು ಹಾಗೂ ಕೆ ಜಿ.ಎಫ್‌ನಲ್ಲಿ ದರೋಡೆ ಪ್ರಕರಣಗಳು

೪೧ (೨೯೯) ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರ ಮತ್ತು ಕೆ.ಜಿ.ಎಫ್‌ನಲ್ಲಿ ಕಳೆದ ಮೂರು ವರ್ಷಗಳಲ್ಲಿ ವರದಿಯಾದ ಒಟ್ಟು ದರೋಡೆ ಪ್ರಕರಣಗಳು ಎಷ್ಟು ?

ಆ) ಈ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ?

ಇ) ಈ ಎರಡು ನಗರಗಳಲ್ಲಿ ನಾಗರೀಕರಿಗೆ ಈ ಹಾವಳಿಯಿಂದ ಕೊಟ್ಟು ರಕ್ಷಣೆಯೇನು ?

ಈ) ಪ್ರತಿನಿತ್ಯ ರಾತ್ರಿ ಗಸ್ತು ತಿರುಗಲು ಸರಕಾರದವರು ಮೊಬೈಲ್ ಸ್ಕ್ವಾಡ್‌ನ್ನು ರಚಿಸಿದ್ದಾರೆಯೇ ?

ಶ್ರೀ ಬಿ. ರಾಚಯ್ಯ (ಗೃಹಸಚಿವರು).—

		೧೯೮೪	೧೯೮೫	೧೯೮೬
ಅ)	ಬೆಂಗಳೂರು	೧೩	೧೪	೧೭
	ಕೆ.ಜಿ.ಎಫ್.	೨	೨	೦
ಆ)	ಬೆಂಗಳೂರು	೪	೧೦	೪
	ಕೆ.ಜಿ.ಎಫ್.	೦	೦	೦

ಇ) ಹೊರ ರಕ್ಷಣೆ ನೀಡಲು ಗಸ್ತನ್ನು ಬೆಂಗಳೂರು ಮತ್ತು ಕೆ.ಜಿ.ಎಫ್. ನಲ್ಲಿ ಹೆಚ್ಚು ಮಾಡಲಾಗಿದೆ ಮತ್ತು ಹೆದ್ದಾರಿ ರಾತ್ರಿ ಗಸ್ತನ್ನು ಸಹ ದುರ್ಬಲ ಪ್ರದೇಶಗಳಲ್ಲಿ ಹೆಚ್ಚು ಮಾಡಲಾಗಿದೆ.

ಈ) ಇಲ್ಲ.

SRI T. S. MANI.—Dacoity is becoming frequent in many areas. Government should set up the special *anti-dacoity* squads with mobile vans, 3 squads in K. G. F. and 15 to 20 squads in Bangalore should patrol in every area from dusk to down.

SRI B. RACHAIAH.—This is being done during the day time and during dark night also we have been intensifying the mobile squads.